ಒ ಎಸ್ ನಂ.**1321/2023**
ಪಿ.ಡಬ್ಲ್ಯೂ**1**

**ದಿನಾಂಕಃ 27.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಶ್ರೀಕಾಂತ್ ಪ್ರತಿವಾದಿ ಪರ ವಕೀಲರಿಂದಃ-**

ನಾನು ಬಿ.ಇ. ಓದಿರುತ್ತೇನೆ. ನನ್ನದು **ಕನ್ಸ್ಟ್ರಕ್ಷನ್** ಫರ್ಮ ಇರುತ್ತದೆ. ಜರ್ನಾಧನ ರೆಡ್ಡಿ ನನ್ನ ಪಾಟ್ನರ್ ಆಗಿರುತ್ತಾನೆ. 2 ನೇ ವಾದಿಯ ಮಾವ ನನ್ನ ತಂದೆಯ ಸಹೊದ್ಯೋಗಿ ಆಗಿದ್ದನು, ಆದ್ದರಿಂದ ಕಳೆದ 20 ವರ್ಷಗಳಿಂದ ಪರಿಚಯ. ವಾದಿ ನಂ.2 ಸಾಫ್ಟವೇರ್ ಇಂಜಿನಿಯರಿಂಗ್ ಆಗಿದ್ದಾರೆ. 2 ನೇ ವಾದಿ UK ದಲ್ಲಿ ವಾಸವಾಗಿದ್ದಾರೆ. 2 ನೇ ವಾದಿ ಈ ದಾವೆ ನಡೆಸಲು ನನಗೆ ಜಿಪಿಎ ಕೊಟ್ಟಿದ್ದಾನೆ. 2 ನೇ ವಾದಿಯ ಹಣಕಾಸಿನ ಪರಿಸ್ಥಿತಿಯ ಬಗ್ಗೆ ನನಗೆ ಗೊತ್ತಿದೆ. ಮ್ಯಾತೀವ್ ಎನ್ನುವವರ ಕಡೆಯಿಂದ ಪ್ರತಿವಾದಿ ನನಗೆ ಪರಿಚಯವಾಗಿದ್ದಾಳೆ. ಪ್ರತಿವಾದಿ 2020 ರಲ್ಲಿ ಪರಿಚಯವಾದಳು. ನಾನು ಪ್ರತಿವಾದಿಯನ್ನು ಬೇಟಿಯಾಗಿಲ್ಲ ಅವಳ ಗಂಡನನ್ನು ಬೇಟಿಯಾಗಿದ್ದೇನೆ. ಪ್ರತಿವಾದಿಯ ಗಂಡನನ್ನು ದಾವಾ ಆಸ್ತಿಯ ಬಳಿ ಬೇಟಿಯಾಗಿದ್ದೆನು. ಕ್ರಯದ ಕರಾರು ಆಗುವ ಮುಂಚೆ ಬೇಟಿಯಾಗಿದ್ದೆನು. ದಾವಾ ಆಸ್ತಿ ನೋಡಲು 2 ನೇ ವಾದಿ ಕೂಡ ನನ್ನ ಜೊತೆ ಬಂದಿದ್ದರು. ದಾವಾ ಆಸ್ತಿಯನ್ನು ನೋಡಿ ಅದರ ನಂತರ ನಾವು ಮಾತುಕತೆ ಮಾಡಿದ್ದೇವೆ.

ಕರಾರು ಪತ್ರದಲ್ಲಿ ಬರೆದಿರುವ ಷರತ್ತುಗಳು ನನಗೆ ಗೊತ್ತಿದೆ. ಕರಾರು ಪತ್ರ ಆಗುವ ಮುಂಚೆ ಪ್ರತಿವಾದಿ ಕೆಲವು ದಾಖಲೆಗಳನ್ನು ನನಗೆ ಕೊಟ್ಟಿದ್ದಳು. ನಮ್ಮ ವಕೀಲರು ಇನ್ನೂ ದಾಖಲೆಗಳು ಬೇಕು ಎಂದಾಗ ಪ್ರತಿವಾದಿ ನಮಗೆ ಸಹಕರಿಸಲಿಲ್ಲ. ಕ್ರಯಪತ್ರ, ತೆರಿಗೆ ಪಾವತಿ ರಶೀದಿ ಮತ್ತು ಖಾತಾ ನಕಲುಗಳನ್ನು ನಮಗೆ ಕೊಟ್ಟಿದ್ದಳು. ನಿಪಿ.2 ಕರಾರು ಪತ್ರವನ್ನು ನಮ್ಮ ವಕೀಲರು ತಯಾರಿಸಿದ್ದಾರೆ. 2 ನೇ ವಾದಿ ಮತ್ತು ಪ್ರತಿವಾದಿ ನಿಪಿ.2 ದಾಖಲೆಗೆ ಇಂಗ್ಲೆಂಡ್ ನಲ್ಲಿ ಸಹಿ ಹಾಕಿ ನಂತರ ಅದನ್ನು ನನಗೆ ಕಳುಹಿಸಿ ಕೊಟ್ಟರು. ಸದರಿ ದಾಖಲೆ ನನಗೆ ತಲುಪಿದ ಮೇಲೆ ಅದರ ಮೇಲೆ ನಾನು ಸಹಿ ಮಾಡಿರುತ್ತೇನೆ. ನಾನು ನಿಪಿ.2 ದಾಖಲೆಗೆ ಸಹಿ ಮಾಡುವಾಗ 2 ನೇ ವಾದಿ ನನ್ನ ಜೊತೆ ಇದ್ದನು. ನಿಪಿ.2 ರ ಮೇಲೆ ಇರುವ ಇಬ್ಬರ ಸಾಕ್ಷಿದಾರರ ಸಹಿಗಳನ್ನು ಇಂಗ್ಲೆಂಡ್ ನಲ್ಲಿ ಹಾಕಿ ನನಗೆ ಕಳುಹಿಸಿದ್ದಾರೆ. ನಿಪಿ.2 ದಾಖಲೆ ಯ ಮೇಲೆ ನಾನು ಸಹಿ ಮಾಡುವಾಗ ಸಾಕ್ಷಿಗಳು ಹಾಜರಿರಲಿಲ್ಲ. ನಿಪಿ.2 ರ ಮೇಲೆ ನಾನು ಮತ್ತು 2 ನೇ ವಾದಿ ಪ್ರತಿ ಪುಟದಲ್ಲಿ ಸಹಿಗಳನ್ನು ಮಾಡಿದ್ದೇವೆ, ಆದರೆ ಪ್ರತಿವಾದಿ ಕೊನೆಯ ಪುಟದಲ್ಲಿ ಸಹಿ ಮಾಡಿದ್ದಾರೆ ಎನ್ನುವುದು ನಿಜ. ಪ್ರತಿವಾದಿಯ ಜೊತೆ ವಿಚಾರಣೆ ಮಾಡದೇ ನಾವು ನಿಪಿ.2 ದಾಖಲೆಯನ್ನು ತಯಾರಿಸಿದ್ದೇವೆ ಎನ್ನುವುದು ಸರಿಯಲ್ಲ.

ಒ ಎಸ್ ನಂ.**1321/2023**
ಪಿ.ಡಬ್ಲ್ಯೂ:**1**

ನಿಪಿ.2 ದಾಖಲೆ ತಯಾರಿಸುವ ಮುಂಚೆ ನಮ್ಮ ಮತ್ತು ಪ್ರತಿವಾದಿಯ ಮಧ್ಯೆ ಇ-ಮೇಲ್ ವಾಟ್ಸಪ್ ಕರೆಸ್ಪಾಂಡೆನ್ಸ್ ಆಗಿರುತ್ತದೆ.

ನಿಪಿ.2 ರ ಪ್ರಕಾರ ಕ್ರಯಪತ್ರ ಮಾಡಿಕೊಡುವಂತೆ 2 ನೇ ವಾದಿ ಫೋನ್ ಮತ್ತು ವಾಟ್ಸಪ್ ಮುಖಾಂತರ ಪ್ರತಿವಾದಿಗೆ ಕೇಳಿಕೊಂಡಿದ್ದಾನೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಿಪಿ.2 ದಾಖಲೆಯ ಮೇಲೆ ದಿಃ 20.8.2022 ರಂದು ಸ್ಟಾಂಪ್ ಡ್ಯೂಟಿ ಪೇಮೆಂಟ್ ಮಾಡುವ ವಿಷಯವನ್ನು ನಾವು ತಿಳಿಸಿರುವುದಿಲ್ಲ. ದಿಃ 30.06.2022 ರೊಳಗಾಗಿ ನಾವು ಕ್ರಯಪತ್ರ ಮಾಡಿಕೊಳ್ಳಬೇಕಾಗಿತ್ತು ಎನ್ನುವುದು ನಿಜ. ಆದಾದ ನಂತರ ದಿಃ 20.08.2022 ರಂದು ನಾವು ಕರಾರು ಪತ್ರದ ಮೇಲೆ ಸ್ಟಾಂಪ್ ಡ್ಯೂಟಿ ಪೇಮೆಂಟ್ ಮಾಡಿದ್ದೇವೆ ಎನ್ನುವುದು ನಿಜ. ಸ್ಟಾಂಪ್ ಡ್ಯೂಟಿ ಪೇಮೆಂಟ್ ಮಾಡಿದ 10 ದಿವಸಗಳ ನಂತರ ನಾವು ಪ್ರತಿವಾದಿಗೆ ರೆಡಿ ಅಂಡ್ ವಿಲ್ಲಿಂಗ್ ನೆಸ್ ನೋಟಿಸ್ ಕೊಟ್ಟಿದ್ದೇವೆ ಎನ್ನುವುದು ನಿಜ. ಪ್ರತಿವಾದಿಗೆ ನೋಟಿಸ್ ತಲುಪಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ದಿಃ 03.09.2022 ರೊಳಗಾಗಿ ಪ್ರತಿವಾದಿಗೆ ನೋಟಿಸ್ ತಲುಪಿದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**